7.	ಮೈಸೂರು	4	–
8.	ಮಂಡ್ಯ	2	–
9.	ಹಾಸನ	5	–
10.	ದಕ್ಷಿಣ ಕನ್ನಡ	3	–
11.	ಬೆಳಗಾಂ	3	2
12.	ಬಿಜಾಪುರ	5	–
13.	ಧಾರವಾಡ	6	–
14.	ಉತ್ತರ ಕನ್ನಡ	3	–
15.	ಬೀದರ್	4	1
16.	ಗುಲ್ಬರ್ಗಾ	8	1
17.	ಚಿಕ್ಕಮಗಳೂರು	2	1
18.	ರಾಯಚೂರು	4	–
19.	ಬಳ್ಳಾರಿ	3	1
20.	ಕೊಡಗು	1	–
		87	9

ಅ) ಮತ್ತು ಇ) ಹೊಸ ವಿದ್ಯಾರ್ಥಿನಿಲಯಗಳಿಗೆ ಕೆಲವು ಸ್ಥಳಗಳಲ್ಲಿ ಬೇಡಿಕೆಯಿದೆ. ಡಾ. ಬಿ. ಆರ್. ಅಂಬೇಡ್ಕರ್ ಜನ್ಮಶತಾಬ್ದಿ ಅಂಗವಾಗಿ 1990–91 ರಿಂದ 1993–94ರ ಅವಧಿಯಲ್ಲಿ ಹೊಸ ವಿದ್ಯಾರ್ಥಿನಿಲಯಗಳ ಬೇಡಿಕೆಯನ್ನು ಪರಿಶೀಲಿಸಿ ಉಳಿದ 54 ಹೊಸ ವಿದ್ಯಾರ್ಥಿನಿಲಯವೆನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

ಅಕ್ರಮವಾಗಿ ಗ್ರಾನೈಟ್ ಕಲ್ಲುಗಳನ್ನು ತೆಗೆಯುತ್ತಿರುವ ಬಗ್ಗೆ

1196. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ಅಕ್ರಮವಾಗಿ ಗ್ರಾನೈಟ್ ಕಲ್ಲುಗಳನ್ನು ತೆಗೆಯುತ್ತಿದ್ದರೂ ರಾಜ್ಯ ಸರ್ಕಾರ ಕಂಡೂ ಕಾಣದಂತೆ ಇರುವ ಉದ್ದೇಶವೇನು?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

ಆ) ಅಕ್ರಮವಾಗಿ ಗ್ರಾನೈಟ್ ತೆಗೆಯುತ್ತಿರುವುದನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಮತ್ತು ಪ್ರಯತ್ನ ಮುಂದುವರಿಯುತ್ತಿದೆ, ಅವು ಯಾವುವೆಂದರೆ (1) ಸ್ಥಳ ತನಿಖೆ ನಡೆಸಿ ಅನಧಿಕೃತ ಕೆಲಸ ನಿಲ್ಲಿಸುವುದು (2) ಕೆಗೆದಿದ್ದ ಗ್ರಾನೈಟ್ ದಿಮ್ಮಿಗಳನ್ನು ಜಪ್ತಿ ಮಾಡಿ ಅವುಗಳನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಮೆ || ಎಂ.ಎಂ.ಎಲ್.ಗೆ ವಹಿಸಿಕೊಡುವುದು, ಹಾಗೂ (3) ಸಾಗಾಣಿಕೆ ಪರವಾನಗಿ ಇಲ್ಲದೆ ಗ್ರಾನೈಟ್ ದಿಮ್ಮಿಗಳನ್ನು ಸಾಗಣೆ ಮಾಡುತ್ತಿರುವ ವಾಹನಗಳನ್ನು ತನಿಖೆ ಮಾಡಿ (ಮಂಗಳೂರಿನ ಬಳಿಯ ಚೆಕ್‌ಪೋಸ್ಟ್‌ನಲ್ಲಿ ಹಾಗೂ ಮಾರ್ಗಮಧ್ಯದಲ್ಲಿ) ಪರವಾನಗಿಯನ್ನು ಪಡೆಯದೆ ಸಾಗಿಸುವ ಗ್ರಾನೈಟ್ ಕಲ್ಲುಗಳಿಗೆ ರಾಜಧನ ಮತ್ತು ದಂಡವನ್ನು ವಿಧಿಸುವುದು : ದಂಡದ ಮೊತ್ತವನ್ನು ರಾಜಧನದ 5 ರಷ್ಟಕ್ಕೆ ಇತ್ತೀಚೆಗೆ ಏರಿಸಿ ಆ ಬಗ್ಗೆ ಸಾರ್ವಜನಿಕ ಸೂಚನೆ ನೀಡಲಾಗಿದೆ. ಈ ಕ್ರಮಗಳಿಂದ ಅಕ್ರಮ ಗ್ರಾನೈಟ್ ಕಲ್ಲುಗಣಿಕಾರಿಕೆ

ಮತ್ತು ಸಾಗಾಟ ತಡೆಯಲಾಗುತ್ತಿದೆ ಹಾಗೂ ಕೆ.ಎಂ.ಎಂ.ಸಿ. ನಿಯಮಾವಳಿಯಲ್ಲಿ ಅಳವಡಿಸಿರುವ ಅಧಿಕಾರವನ್ನು ಗ್ರಾನೈಟ್ ಕಲ್ಲಿನ ಕಳ್ಳ ಸಾಗಾಣಿಕೆಯನ್ನು ತಡೆಯುವ ಉದ್ದೇಶದಿಂದ ಕಂದಾಯ ಇಲಾಖೆಯ ಅಧಿಕಾರಿಗಳಿಗೂ ವಹಿಸಿಕೊಡಲಾಗಿದೆ. ಇದೂ ಅಲ್ಲದೆ ವಾಣಿಜ್ಯ ತೆರಿಗೆ ಇಲಾಖೆಯ ಸುಂಕದ ಕಟ್ಟೆಯಲ್ಲಿ ರಾಜಧನವನ್ನು ನೀಡದೆ ಕೊಂಡೊಯ್ಯುವ ಗ್ರಾನೈಟ್ ಕಲ್ಲುಗಳನ್ನು ಮತ್ತು ಇತರ ಖನಿಜಗಳನ್ನು ತಡೆದು ಸರ್ಕಾರಕ್ಕೆ ಬರಬೇಕಾಗಿದ್ದ ರಾಜಸ್ವ ಮತ್ತು ದಂಡವನ್ನು ವಸೂಲು ಮಾಡುವ ಅಧಿಕಾರವನ್ನು ವಾಣಿಜ್ಯ ತೆರಿಗೆ ಇಲಾಖೆಯ ಸುಂಕದ ಕಟ್ಟೆಯ ಅಧಿಕಾರಿಗಳಿಗೆ ವಹಿಸಿಕೊಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳು

1195. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಸರ್ಕಾರ ಈಡೇರಿಸದೇ ಇರಲು ಕಾರಣವೇನು ;
ಆ) ಇವರ ಬೇಡಿಕೆಗಳನ್ನು ಎಷ್ಟು ಅವಧಿಯ ಒಳಗೆ ಈಡೇರಿಸಲಾಗುವುದು ;

ಶ್ರೀ ಎ.ಎಸ್. ನಾಡಗೌಡ (ಸಮಾಜ ಕಲ್ಯಾಣ ಸಚಿವರು) –

ಅ) ಸಮಗ್ರ ಬಾಲ ವಿಕಾಸ ಯೋಜನೆಯು ರಾಜ್ಯದಲ್ಲಿ ಕೇಂದ್ರ ಸರ್ಕಾರದ ಮಾರ್ಗ ಸೂಚಿಯಂತೆ ಕಾರ್ಯಗತಗೊಳಿಸುತ್ತಿರುವುದರಿಂದ ಇವರ ಪ್ರಮುಖ ಬೇಡಿಕೆಗಳನ್ನು ಭಾರತ ಸರ್ಕಾರವೇ ಪರಿಗಣಿಸಬೇಕಾಗುತ್ತದೆ. ಇವರ ಇತರ ಕೆಲವು ಬೇಡಿಕೆಗಳನ್ನು ರಾಜ್ಯ ಸರ್ಕಾರವು ಸಾಧ್ಯವಾದ ಮಟ್ಟಿಗೆ ಈಡೇರಿಸಲಾಗಿದೆ. ಇನ್ನೂ ಕೆಲವು ಬೇಡಿಕೆಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ.
ಆ) 'ಅ' ನಲ್ಲಿ ತಿಳಿಸಿರುವ ಕಾರಣಗಳಿಂದ ರಾಜ್ಯ ಸರ್ಕಾರದ ವ್ಯಾಪ್ತಿಯ ಬೇಡಿಕೆಗಳನ್ನು ಅತೀ ಶೀಘ್ರವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಕಾರ್ಮಿಕ ಮೊಕದ್ದಮೆಗಳು.

1194. ಶ್ರೀ ವಾಟಾಳ್ ನಾಗರಾಜ್, (ಚಾಮರಾಜನಗರ) :– ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿರುವ ಕಾರ್ಮಿಕ ಮೊಕದ್ದಮೆಗಳೆಷ್ಟು ;
ಆ) ಎಷ್ಟು ಕಾರ್ಮಿಕ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಕೊರತೆ ಇದೆ?

ಶ್ರೀ. ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) –

ಅ) 12,344 (1991ರ ಡಿಸೆಂಬರ್ ಅಂತ್ಯದವರೆಗೆ)
ಆ) 1. ಕಾರ್ಮಿಕ ನ್ಯಾಯಾಲಯಗಳು

ಮೈಸೂರು, ಚಿಕ್ಕಮಗಳೂರು, ಹುಬ್ಬಳ್ಳಿ ಮತ್ತು ಬೆಂಗಳೂರು.

2. ಔದ್ಯಮಿಕ ನ್ಯಾಯಾಧೀಕರಣ

ಮೈಸೂರು.